

ಅಗ್ರಹಾರ ಕೃಷ್ಣಮೂರ್ತಿ

# ಜೀವಂತ ನಾಗರಿಕತೆಯ ಉತ್ಖನನ

'ಒಂದು ಹಟ್ಟಿಯ ಆತ್ಮಕಥಾನಕ' ಎನ್ನುವ ಉಪಶೀರ್ಷಿಕೆ ಹೊತ್ತ 'ನಮ್ಮ ಹಟ್ಟಿ' ಕೃತಿ ದಲಿತ ಹೋರಾಟಗಾರ, ನಾಯಕ ಕೆ. ದೊರೈರಾಜ್ ಅವರದು. ಸೊಗಸಾದ ಕಥೆ, ಪ್ರಬಂಧಗಳನ್ನು ಬರೆಯುತ್ತಿರುವ ಜಿ.ವಿ. ಆನಂದಮೂರ್ತಿ ಈ ಆತ್ಮಕಥಾನಕವನ್ನು ನಿರೂಪಣೆ ಮಾಡಿದ್ದಾರೆ.

ತಮ್ಮ ಹಲವು ಸಂಗಾತಿಗಳ ಅನುಭವ, ಹಟ್ಟಿಯ ಹೋರಾಟ, ಹೋರಾಟಕ್ಕೆ ಹೆಗಲು ಕೊಟ್ಟವರ ಬದುಕು ತಮ್ಮ ಆತ್ಮಕಥೆಯಲ್ಲಿ ಸೇರಬೇಕೆಂಬುದು ದೊರೈರಾಜ್ ಅವರ ವಿನೂತನ ಆಲೋಚನೆಯಷ್ಟೇ ಅಲ್ಲ, ಉದಾರವಾದಿ ಗುಣವೂ ಹೌದು. ದೊರೈ ಅವರಿಗೀಗ ಎಂಬತ್ತರ ಗಡಿ ಮುಟ್ಟುತ್ತಿರುವ ವಯಸ್ಸು. ಆತ್ಮಕಥೆ ಹೀಗೆ ಪ್ರಾರಂಭವಾಗುತ್ತದೆ: 'ತುಮಕೂರಿನಲ್ಲಿ ನಾವು ಮಾದಿಗರು ವಾಸ ಮಾಡುವ ಕೇರಿಯನ್ನು 'ದೊಡ್ಡಹಟ್ಟಿ' ಎಂದೇ ಕರೆಯುತ್ತಾರೆ. ಪ್ರಾಚೀನ ನೆನಪುಗಳಿರುವ ಹಟ್ಟಿ ಇದು. ಇನ್ನೂ ಕೆಲವರ ಬಾಯಲ್ಲಿ 'ಮಾದಿಗರ ಹಟ್ಟಿ' ಎಂದೂ ಪ್ರಸಿದ್ಧವಾಗಿದೆ... ನಗರ ಈಗಿನಂತೆ ಬೆಳೆಯುವ ಮುನ್ನ, ನಮ್ಮ ಹಟ್ಟಿ ತುಮಕೂರಿನ ಹೊರಭಾಗದಲ್ಲಿತ್ತು'.

ದೊರೈರಾಜ್ ತಮ್ಮ ಬದುಕಿನ ಕಥನವನ್ನು ಯಾಕೆ ಒಂದು ಸಮುದಾಯದ ಕಥನವನ್ನಾಗಿಸುವ ಕನಸನ್ನು ಕಾಣುತ್ತಾರೆ ಎನ್ನುವುದಕ್ಕೆ ಪ್ರಾರಂಭದ ಅವರ 'ಒಡಲ ಮಾತು'ಗಳಲ್ಲಿ ಉತ್ತರವಿದೆ. ಅವರು ಅಕ್ಷರ ಕಲಿತು, ನೌಕರಿ ಮುಗಿಸಿ, ನಿವೃತ್ತಿಯಾಗಿದ್ದಾರೆ. ಹುಟ್ಟಿದಾಗಿನಿಂದ ಇಂದಿನವರೆಗೂ ಹಟ್ಟಿ ಅವರಿಗೆ ತೋರಿದ ಆರೈಕೆ, ವಿಶ್ವಾಸದಿಂದಾಗಿ ಈಗಲೂ ಹಟ್ಟಿಯ ನಿವಾಸಿಯೇ ಆಗಿದ್ದಾರೆ. ಕನ್ನಡದ ಮತ್ತು ಬೇರೆ ಭಾಷೆಯ ದಲಿತ ಚಿಂತಕರ, ಹೋರಾಟಗಾರರ ಆತ್ಮಕಥೆಗಳನ್ನು ಓದಿರುವ ಅವರಿಗೆ, ಅವೆಲ್ಲ ವ್ಯಕ್ತಿ ಕೇಂದ್ರಿತ ಅನಿಸಿದೆ. ದಲಿತ ಚಳವಳಿಗಳಲ್ಲಿ ಅವುಗಳ ಜೀವಧಾತುಗಳಂತೆ, ಮುಖ್ಯಪ್ರಾಣದಂತೆ ತಮ್ಮ ವೈಯಕ್ತಿಕ ಬವಣೆಗಳನ್ನು ಮರೆತು ಭಾಗವಹಿಸುವ ಬರಿಗಾಲ ಹೋರಾಟಗಾರರು ಅನುಭವಿಸುವ ಯಾತನೆ ವ್ಯಕ್ತಿಕೇಂದ್ರಿತ ಕೃತಿಗಳಲ್ಲಿ ತೆರೆಯ ಹಿಂದಕ್ಕೆ ಸರಿದಿರುತ್ತದೆ.

ದಲಿತ ಚಳವಳಿಯನ್ನು ಕಂಡವರಿಗೆ ಇವರ ಮಾತಿನ ಸತ್ಯ ತಿಳಿಯುತ್ತದೆ. ಆದ್ದರಿಂದ ಹಟ್ಟಿಯವರ ಅನುಭವಗಳ ಮೂಲಕ ಈ ಕಥನ ಕಟ್ಟಲ್ಪಟ್ಟಿದೆ. ಇದನ್ನು ದೊರೈರಾಜ್, '... ಹೋರಾಟದ ಕಡಲಿನಿಂದ ಒಂದು ಬೊಗಸೆ ನೀರನ್ನು ಮಾತ್ರ ಮೊಗೆದು ಕೊಟ್ಟಂತೆ!' ಎನ್ನುತ್ತಾರೆ. ನಮಗೆ 'ಹೋರಾಟದ ಸಾಗರಕ್ಕೆ ಸಾವಿರಾರು ನದಿಗಳು' ಎಂಬ ಸಾಲು ನೆನಪಾಗಿ ದೊರೈರಾಜ್ ದಲಿತ ಚಳವಳಿಗೊಂದು ಪೊಯಟಿಕ್ ಜಸ್ಟೀಸ್ ಒದಗಿಸಿದ್ದಾರೆ ಅನಿಸುತ್ತದೆ. ವಿದ್ಯಾವಂತರಾಗಿ ನೌಕರಿ ಹಿಡಿಯುವ ಅನೇಕರು ತಮ್ಮ ಹಟ್ಟಿಗಳನ್ನು ತೊರೆಯುತ್ತಾರೆ; ಇಲ್ಲವೇ